**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 4551/2022**

**ಸಾಕ್ಷಿಗೆ ದಿನಾಂಕ 10.3.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಯೋಗೀಶ್ | ಪಿ.ಡಬ್ಲ್ಯೂ-1 |
| ತಂದೆಯ/ಗಂಡನ ಹೆಸರು | : | ಕೆಂಪೇಗೌಡ | ಸಿ.ಡಬ್ಲ್ಯೂ-3 |
| ವಯಸ್ಸು | : | 27 | |
| ಉದ್ಯೋಗ | : | ಖಾಸಗಿ ಉದ್ಯೋಗ | |
| ವಾಸಸ್ಥಳ | : | ಹೆಚ್.ಡಿ.ಕೋಟೆ | |

**<u>ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ</u>**

ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನಾನು ನೋಡಿರುವುದಿಲ್ಲ. ಈಗ ನೋಡುತ್ತಿರುವ ಎರಡು ದಾಖಲೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಅದನ್ನು 3 ವರ್ಷದ ಹಿಂದೆ ಹೆಚ್.ಡಿ.ಕೋಟೆ ಪೋಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಸದರಿ ದಾಖಲೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಸ್ಥಳಕ್ಕೆ ದಾಳಿ ಮಾಡಿರುವುದಿಲ್ಲ ಮತ್ತು ಯಾವುದೇ ಮಧ್ಯದ ವಸ್ತುವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಸಾಕ್ಷಿದಾರರು ಮೊದಲನೇ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಪೋಲಿಸ್ ನೋಟಿಸ್ ಆಗಿದ್ದು ಅದನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1ಎ ಎಂದು ಗುರುತಿಸಲಾಯಿತು. ಸಾಕ್ಷಿದಾರರು ಎರಡನೇ ದಾಖಲೆಯನ್ನು ನೋಡಿ ಗುರುತಿಸಿದ್ದು ಸದರಿ ದಾಖಲೆಯು ಮಹಜರ್ ಆಗಿದ್ದು ಅದನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2ಎ ಎಂದು ಗುರುತಿಸಲಾಯಿತು. ನಾನು ಪೋಲಿಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**<u>ಪಾಟೀಸವಾಲುಃ ಎಪಿಪಿ ರವರಿಂದಃ</u>**

ದಿನಾಂಕ 6.11.2021ರಂದು ಬೆಳಿಗ್ಗೆ 9 ಗಂಟೆಯಲ್ಲಿ ಹೆಚ್.ಡಿ.ಕೋಟೆ ಟೌನಿನ ಇಂದಿರಾ ಕ್ಯಾಂಟಿನ್ ಹಿಂಭಾಗ ಇರುವ ಸರ್ಕಾರಿ ಖಾಲಿ ಜಾಗದಲ್ಲಿ ನ್ಯಾಯಾಲಯದ ಮುಂದಿರುವ 1 ನೇ ಆರೋಪಿ

ಯು 90 ಎಂ.ಎಲ್ ನ 28 ಒರಿಜಿನಲ್ ಚಾಯ್ಸು ವಿಸ್ಕಿಯ ಸ್ಯಾಚೆಟುಗಳನ್ನು ಹಾಗೂ 1 ನೇ ಆರೋಪಿಯು 90 ಎಂ.ಎಲ್ ನ 27 ಒರಿಜಿನಲ್ ಚಾಯ್ಸು ವಿಸ್ಕಿಯ ಸ್ಯಾಚೆಟುಗಳನ್ನು ಮತ್ತು 15 ಪ್ಲಾಸ್ಟಿಕ್ ಲೋಟಗಳನ್ನು ಇಟ್ಟುಕೊಂಡು ಮಧ್ಯ ಮಾರಾಟ ಮಾಡುತ್ತಿದ್ದಾಗ ಪೋಲಿಸರು ನನ್ನ ಹಾಗೂ ಚಾಸ 2 ರವರ ಸಮಕ್ಷಮ ಸದರಿ ಸ್ಥಳಕ್ಕೆ ದಾಳಿ ಮಾಡಿ ಮಧ್ಯದ ಸ್ಯಾಚೆಟುಗಳನ್ನು ಅಮಾನತ್ತುಪಡಿಸಿಕೊಂಡು ನಿಪಿ2 ರಂತೆ ಮಹಜರನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮಹಜರು ಮಾಡುವ ಸಮಯದಲ್ಲಿ ನಿಪಿ1 ರಂತೆ ನೋಟಿಸನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಘಟನೆಯ ವಿಚಾರವಾಗಿ ಈಗ ಓದಿ ಹೇಳಿದಂತೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಒಪ್ಪಿಕೊಳ್ಳದ ಹೇಳಿಕೆಯ ಭಾಗವನ್ನು ನಿಪಿ3 ಎಂದು ಗುರುತಿಸಲಾಯಿತು. ನಾನು ಸದರಿ ಸ್ಥಳದಲ್ಲಿ ಹಾಜರಿದ್ದು ಮಹಜರಿಗೆ ಸಹಿ ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ ಇಲ್ಲ

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ